ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ಕ್ಷೇತ್ರ ವಿಭಾಗ (IMD)
ಜಿ.ಕೆ.ವಿ.ಕೆ., ಬೆಂಗಳೂರು-560065

# * ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ *

ದಿನಾಂಕ: 09.06.2020

## ಬೆಂಗಳೂರು ನಗರ ಜಿಲ್ಲೆಗೆ ಸೀಮಿತವಾಗಿದೆ.

### ಈ ವಾರದ ಹವಾಮಾನ ಮುನ್ಸೂಚನೆ (ಭಾರತೀಯ ಹವಾಮಾನ ಇಲಾಖೆ)

(ದಿನಾಂಕ 10-06-2020 ರಿಂದ 14-06-2020 ವರೆಗೆ)

| ನಿಯತಾಂಕಗಳು | 10.06.2020 | 11.06.2020 | 12.06.2020 | 13.06.2020 | 14.06.2020 |
|---|---|---|---|---|---|
| ಮಳೆ (ಮಿ ಮೀ) | 3 | 4 | 7 | 10 | 12 |
| ಗರಿಷ್ಠ ಉಷ್ಣಾಂಶ(ಡಿ.ಸೆ. ) | 32 | 32 | 31 | 31 | 31 |
| ಕನಿಷ್ಠ ಉಷ್ಣಾಂಶ (ಡಿ.ಸೆ. ) | 21 | 21 | 20 | 20 | 21 |
| ಮೋಡ ( ಪ್ರಮಾಣ) | 7 | 7 | 7 | 7 | 7 |
| ಆರ್ದ್ರತೆ 7.20 ಬೆ (ಶೇ) | 80 | 81 | 82 | 81 | 84 |
| ಆರ್ದ್ರತೆ 2.20 ಮ (ಶೇ) | 50 | 50 | 54 | 53 | 58 |
| ಗಾಳಿಯ ವೇಗ (ಕಿ.ಮಿ/ಗಂಟೆಗೆ) | 4 | 4 | 5 | 5 | 5 |
| ಗಾಳಿಯ ದಿಕ್ಕು ( ಡಿಗ್ರಿ) | 291 | 283 | 270 | 252 | 248 |

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಮುಂದಿನ ನಾಲ್ಕೈದು ದಿನಗಳಲ್ಲಿ ಹಗುರ ಮಳೆಯಾಗುವ ಸಾಧ್ಯತೆ ಇದೆ. ದಿನದ ಗರಿಷ್ಠ ಉಷ್ಣಾಂಶ 31.0-32.0 $^{o}$C ಮತ್ತು ಕನಿಷ್ಠ 20.0-21.0 $^{o}$ C ಇರುವ ಸಾಧ್ಯತೆ ಇದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ 80-84 % ಇದ್ದು ಮಧ್ಯಾಹ್ನ 50-58 % ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 4-5 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

### "ರೋಹಿಣಿ ರೂಪಾಯಿ, ಮೃಗಶಿರ ಮುಕ್ಕಾಲು, ಆರಿದ್ರ ಅರ್ಧ"

- ಮೃಗಶಿರ ನಕ್ಷತ್ರದ ಮಳೆಯ ಕಾಲವು ಜೂನ್ ತಿಂಗಳ 8 ರಿಂದ ಜೂನ್ 21 ರ ವರೆಗೆ ಇರುತ್ತದೆ. ಈ ನಕ್ಷತ್ರದ ಪೂರ್ವ ಒಣ ವಲಯದ ಸರಾಸರಿ ಮಳೆಯು 34.9 ಮಿ.ಮೀ. ವರೆಗೆ ಮಳೆಯಾಗುತ್ತದೆ.

### ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

| ಬೆಳೆಗಳು | ಹವಾಮಾನ ಆಧಾರಿತ ಕೃಷಿ ಸಲಹೆಗಳು |
|---|---|
| ಸಾಮಾನ್ಯ | ➢ ಕೋವಿಡ್-19 ವೈರಾನುವಿನ ನಿಯಂತ್ರಣಕ್ಕಾಗಿ ರೈತರು ವ್ಯಕ್ತಿಯಿಂದ ವ್ಯಕ್ತಿಗೆ 3-4 ಅಡಿಗಳ ಅಂತರವನ್ನು ವಿಶ್ರಾಂತಿ ಸಮಯದಲ್ಲಿ, ಆಹಾರ ಸೇವನೆಯ ಸಂದರ್ಭದಲ್ಲಿ, ಕೃಷಿ ಉತ್ಪನ್ನಗಳನ್ನು ಸಂಗ್ರಹಿಸುವಾಗ, ಇಳಿಸುವಾಗ/ಹೊತ್ತೊಯ್ದು ಅಡಕಿಸುವಾಗ ಹೀಗೆ ಪ್ರತಿ ಹಂತದಲ್ಲೂ ಸುರಕ್ಷಿತಾ ದೃಷ್ಟಿಯಿಂದ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಬೇಕು. ಎಲ್ಲಾ ಕೃಷಿ ಪರಿಕರಗಳ ಅಂಗಡಿಗಳು ತೆರೆದಿರುತ್ತವೆ. ಕೃಷಿಕರು ಈ ಅಂಗಡಿಗಳಲ್ಲಿ ಬೀಜ, ಗೊಬ್ಬರ ಮತ್ತು ರಾಸಾಯನಿಕಗಳನ್ನು ಕೊಳ್ಳುವಾಗ ಪರಸ್ಪರ 4 ಅಡಿಗಳ ಅಂತರವನ್ನು ಕಾಯ್ದುಕೊಳ್ಳಬೇಕು<br>➢ ಮುಂಬರುವ ಬಿತ್ತನೆಗೆ ಅಗತ್ಯವಿರುವ ಬಿತ್ತನೆ ಬೀಜಮಾದರಿಯನ್ನು ಬೀಜಪರೀಕ್ಷಾಲಯಕ್ಕೆ ಕಳುಹಿಸುವ ಮೂಲಕ ಮೊಳಕೆ ಪ್ರಮಾಣದ ಸಾಮರ್ಥ್ಯ ತಿಳಿದುಕೊಳ್ಳುವುದು.<br>➢ ಎರಡು ಬೆಳೆ ಪದ್ಧತಿಗಳು: ಆಳವಾದ ಮಣ್ಣನ್ನು ಹೊಂದಿರುವ ಹಾಗೂ 5-6 ತಿಂಗಳುದ್ದಕ್ಕೂ ಮಳೆ ಸಮನಾಗಿ ಬೀಳುವ ಪ್ರದೇಶಗಳಲ್ಲಿ ಎರಡು ಬೆಳೆ ಪದ್ಧತಿಯನ್ನು ಅನುಸರಿಸಬಹುದು.<br>➢ ಎರಡು ಬೆಳೆ ಪದ್ಧತಿ ಅನುಸರಿಸುವ ರೈತರುಸದಾ ಜಾಗರೂಕರಾಗಿ, ಬೀಳುವ ಮಳೆಯನ್ನು ಸಂರಕ್ಷಣೆ ಮಾಡಿಕೊಂಡು ಹೆಚ್ಚಿನ ಖರ್ಚು ಭರಿಸಲು ಸಿದ್ಧವಿದ್ದಲ್ಲಿ ವರ್ಷದಲ್ಲಿ ಎರಡು ಬೆಳೆಗಳನ್ನು ಖುಷ್ಕಿ ಪ್ರದೇಶದಲ್ಲಿಯೂ ತೆಗೆದುಕೊಳ್ಳಲು ಸಾಧ್ಯ.<br>➢ ಉತ್ತಮ ಮಳೆಯ ಮುನ್ಸೂಚನೆ ಇರುವುದರಿಂದ ಖುಷ್ಕಿ ಜಮೀನಿನಲ್ಲಿ ಬದು ಮತ್ತು ಬಸಿಗಾಲುವೆಗಳನ್ನು ಸ್ವಚ್ಛ ಮಾಡುವುದು ಹಾಗು ಕೃಷಿ ಹೊಂಡಗಳನ್ನು ದುರಸ್ತಿಗೊಳಿಸಿ ನೀರು ನಿಧಾನವಾಗಿ ಹರಿಯುವಂತೆ ಮಾಡುವುದು ಮಣ್ಣಿನ ಸವಕಳಿ ತಪ್ಪಿಸಿ ಹಾಗು ಮಣ್ಣಿನ ಸಂರಕ್ಷಣೆ ಮಾಡುವುದು.<br>➢ **ಏಕಬೆಳೆ ಪದ್ಧತಿಯಲ್ಲಿ ಈ ಕೆಳಗಿನ ದೀರ್ಘಾವಧಿ ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ** |

| | |
|---|---|
| | ತೊಗರಿ : ಟಿ.ಟಿ.ಬಿ–7, ಬಿ.ಆರ್.ಜಿ–1,2,4ಮತ್ತು 5<br>ಹರಳು: ಡಿ.ಸಿ.ಎಸ್–9 (ಜ್ಯೋತಿ), ಡಿ.ಸಿ.ಎಚ್–177 ಮತ್ತು 32<br>ಮುಸುಕಿನ ಜೋಳ: ಗಂಗಾ–11, ಡೆಕ್ಕನ್–103, ವಿಜಯ ಕಾಂಪ್ರೋಸಿಟ್, ಕಾಂಪ್ರೋಸಿಟ್ ಎನ್.ಎ.ಸಿ–6004,6002, ನಿತ್ಯಶ್ರೀ–ಸಂಕರಣ ತಳಿ<br><br>➢ ತೊಗರಿ ಬಿತ್ತನೆಗೆ ಮುಂಚೆ ಬೀಜೋಪಚಾರ ಮಾಡುವುದು ಉತ್ತಮ, ಕಾರ್ಬೆನ್‌ಡೈಜಿಮ್ ಅಥವಾ ಥೈರಾಮ್ @ 2 ಗ್ರಾಂ/ ಪ್ರತಿ ಕೆ.ಜಿ ಬೀಜಕ್ಕೆ ಉಪಚರಿಸಿ, ಮತ್ತು ಜೈವಿಕ ಕೀಟನಾಶಕಗಳಾದ ಟ್ರೈಕೋಡರ್ಮ ವಿರಿಡೆ @ 4 ಗ್ರಾಂ/ ಪ್ರತಿ ಕೆ.ಜಿ ಬೀಜಕ್ಕೆ ಅಥವಾ ಸುಡೋಮೋನಾಸ್ ಫ್ಲುರೆಸೆನ್ಸ್ @ 10 ಗ್ರಾಂ/ ಪ್ರತಿ ಕೆ.ಜಿ ಬೀಜಕ್ಕೆ ಮತ್ತು ರೈಜ಼ೊಬಿಯಂ @ 10 ಗ್ರಾಂ/ ಪ್ರತಿ ಕೆ.ಜಿ ಬೀಜಕ್ಕೆ ಬೆರೆಸಿ ಉಪಚರಿಸಿ.<br>➢ **ಎರಡುಬೆಳೆ ಪದ್ಧತಿಯಲ್ಲಿ ಈ ಕೆಳಗಿನ ಮಧ್ಯಮಾವಧಿ ಮತ್ತು ಕಡಿಮೆ ಅವಧಿ ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ**<br>ನೆಲಗಡಲೆ: ಟಿ.ಎಂ.ವಿ–2, ಜೆ.ಎಲ್–24 ಮತ್ತು ಕೆ.ಸಿ.ಜಿ–6<br>ಅಲಸಂದೆ : ಟಿ.ವಿ.ಎಕ್ಸ್–944, ಕೆ.ಬಿ.ಸಿ–1<br>ಹೆಸರು :ಪಿ.ಎಸ್–16, ಪಿ.ಡಿ.ಎಮ್–84, 178 , ಉದ್ದು: ಕರಗಾವ್–3, ಟಿ–9, ರಶ್ಮಿ |
| **ಮಾವು** | ➢ ಮಾವಿನ ಬೆಳೆಗಳಲ್ಲಿ ಹಣ್ಣು ನೊಣದ ನಿಯಂತ್ರಣಕ್ಕಾಗಿ ಕಾರ್ಬರಿಲ್ 4 ಗ್ರಾ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಣೆ ಮಾಡಿ.<br>➢ ಹಣ್ಣನ್ನು ಕಟಾವು ಮಾಡುವ ಸಮ0ಯದಲ್ಲಿ ನೆಲಕ್ಕೆ ತಾಗದ ರೀತಿ ಎಚ್ಚರ ವಹಿಸಿ. ಇದರಿಂದ ಕಟಾವಿನ ನಂತರ ಶಿಲೀಂಧ್ರದಿಂದ ಬರುವ ಹಲವಾರು ರೋಗಗಳನ್ನು ತಡೆ0ಯಬಹುದು.<br>➢ ಜೂನ್ ತಿಂಗಳಿನಲ್ಲಿ ಭೂಮಿಯನ್ನು ಒಂದೆರಡು ಸಾರಿ ಉಳುಮೆ ಮಾಡಿ ಸಮಮಾಡಬೇಕು. ಅನಂತರ 10ಮೀ. ಅಂತರದಲ್ಲಿ 90 ಘನ ಸೆಂ.ಮೀ. ಗಾತ್ರದ ಗುಂಡಿಗಳನ್ನು ತೆಗೆದು ಬಿಸಿಲಿಗೆ ಬಿಡಬೇಕು. ಒಂದೆರಡು ವಾರಗಳ ನಂತರ ಅವುಗಳಿಗೆ ಸಮ ಪ್ರಮಾಣದ ಕೊಟ್ಟಿಗೆ ಗೊಬ್ಬರ ಮತ್ತು ಮೇಲ್ಮಣ್ಣುಗಳ ಮಿಶ್ರಣವನ್ನು ಹರಡಿ ತುಂಬಬೇಕು. |
| | **ಹೈನುಗಾರಿಕೆ** |
| **ಪಶುಸಂಗೋಪನೆ** | ➢ **ಚಪ್ಪೆ ರೋಗ :** ಈ ರೋಗವು ಬ್ಯಾಕ್ಟೀರಿಯಾದಿಂದ ಹರಡುತ್ತದೆ.<br>➢ ಈ ರೋಗವು ದನ, ಎಮ್ಮೆ, ಕುರಿಗಳಲ್ಲಿ ಹರಡುತ್ತದೆ. ಸಾಮಾನ್ಯವಾಗಿ ಈ ರೊಗವು ಮಳೆಗಾಲದ ಕೊನೆಯಲ್ಲಿ ಕಾಣುತ್ತದೆ. ಚಪ್ಪೆ ರೋಗದ ಲಸಿಕೆಯನ್ನು ಪ್ರತಿ ವರ್ಷವೂ ಜೂನ್/ಜುಲೈ ತಿಂಗಳಲ್ಲಿ ಮಾಡಿಸುವುದು. |


**ನೋಡಲ್ ಅಧಿಕಾರಿ:**

ಕೃಷಿ ಹವಾಮಾನ ವಿಭಾಗ

**ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು**